715 (915) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1.4.2000 ರಿಂದ ಈವರೆಗೆ ಜಮಖಂಡಿ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಯಿಂದ ಜೀರ್ಣೋದ್ಧಾರಗೊಂಡ ಮಂದಿರಗಳ ಸಂಖ್ಯೆ ಎಷ್ಟು ; ಅವುಗಳಿಗೆ ತಗಲುವ ವೆಚ್ಚವೆಷ್ಟು ; (ವಿವರ ಒದಗಿಸುವುದು) ;

ಆ) ಈ ತಾಲ್ಲೂಕಿನಲ್ಲಿ ಬಹಳ ಐತಿಹಾಸಿಕ ಮಂದಿರಗಳಿರುವುದು ಸರ್ಕಾರಕ್ಕೆ ತಿಳಿದಿದೆಯೇ ; ಹಾಗಿದ್ದಲ್ಲಿ, ಅವುಗಳನ್ನು ಜೀರ್ಣೋದ್ಧಾರ ಮಾಡಲು ಹಣ ಬಿಡುಗಡೆ ಮಾಡಲಾಗುವುದೇ ;

ಇ) ಪ್ರತಿ ವರ್ಷ ಈ ಕಾರ್ಯಕ್ರಮಕ್ಕೆ ಇಲಾಖೆಯಿಂದ ಮಾಡುವ ಖರ್ಚು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :

ಅ) ಜಮಖಂಡಿ ತಾಲ್ಲೂಕಿನಲ್ಲಿ 1.4.2000 ರಿಂದ 2006–07ನೇ ಸಾಲಿನಲ್ಲಿ ಈವರೆವಿಗೆ ಒಟ್ಟು 15 ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ 4.00 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ (ಪಟ್ಟಿ ಲಗತ್ತಿಸಿದೆ).

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಐತಿಹಾಸಿಕ ಹಾಗೂ ಪುರಾತನ ಹಿನ್ನೆಲೆಯುಳ್ಳ ಪಾರಂಪಾರಿಕ ದೇವಸ್ಥಾನಗಳನ್ನು ಸಂರಕ್ಷಿಸುವ ಸಲುವಾಗಿ ಕರ್ನಾಟಕ ಸಾಂಸ್ಕೃತಿಕ ಸಂರಕ್ಷಣಾ ಸೊಸೈಟಿಯನ್ನು ದಿನಾಂಕ: 29.1.2007ರಂದು ರಚಿಸಲಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ 2006–07ನೇ ಸಾಲಿನಲ್ಲಿ ರೂ.200.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ಈ ಯೋಜನೆಯಡಿ ಸದರಿ ಸೊಸೈಟಿ ವತಿಯಿಂದ ಪಾರಂಪಾರಿಕ ಹಿನ್ನಲೆಯುಳ್ಳ ಸ್ಥಳಗಳನ್ನು ಗುರುತಿಸಿ ಮುಂದಿನ ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾಗುವುದು.

ಇ) ರಾಜ್ಯದ ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರಕ್ಕಾಗಿ ಪ್ರಸಕ್ತ ವರ್ಷವು ಆಯವ್ಯಯದಲ್ಲಿ ರೂ.698.85 ಲಕ್ಷಗಳ ಮೊತ್ತವನ್ನು ಅಳವಡಿಸಲಾಗಿದೆ. ಜಿಲ್ಲಾವಾರು ಮೊತ್ತವನ್ನು ನಿರ್ದಿಷ್ಟವಾಗಿ ಅಳವಡಿಸಿರುವುದಿಲ್ಲ.

ಜಿಲ್ಲಾಧಿಕಾರಿಗಳವರಿಂದ, ಮಾನ್ಯ ಸಚಿವರುಗಳಿಂದ ಹಾಗೂ ಮಾನ್ಯ ಶಾಸಕರುಗಳಿಂದ ಅನುದಾನ ಕೋರಿ ಬಂದಂತಹ ಪ್ರಸ್ತಾವನೆಗಳಿಗೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಅರ್ಹ ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡಲಾಗುವುದು.

2001-02 ರಿಂದ 2005-06ರವರೆಗೆ ಜಮಖಂಡಿ ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರಾದ ಅನುದಾನದ ವಿವರ

ಕ್ರ.ಸಂ	ದೇವಸ್ಥಾನದ ಹೆಸರು	ತಾಲ್ಲೂಕು	ಮೊತ್ತ
1	ರಾಂಪುರ ನೀಲಕಂಠೇಶ್ವರ ದೇವಸ್ಥಾನ, ರಿಬಕಲಿ, ಬಸಪಟ್ಟಿ	ಜಮಖಂಡಿ	30,000/-
2	ಶ್ರೀ ಮಲ್ಲಿಕಾರ್ಜುನ ಅಕ್ಕ ಮಹಾದೇವಿ ಟ್ರಸ್ಟ್ ಸಮಿತಿ, ಹುಲ್ಲಾಳ	"	25.000/-
3	ಶ್ರೀ ಬಿರಮ ದೇವರ ದೇವಸ್ಥಾನ, ಸಾವಳಗಿ	"	25.000/-
4	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, ಕಾಚಬೀಳಗಿ	"	25.000/-
5	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, (ಕಲ್ಲುಬ್ಬಿ) ಹೇರಾಳ	"	20.000/-
6	ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಹೀರಾಳ	"	25.000/-
7	ಶ್ರೀ ದಾನಮ್ಮ ದೇವಸ್ಥಾನ, ಜಮಖಂಡಿ	"	25.000/-
8	ಶ್ರೀ ಬಾಶಂಕರಿ ದೇವಸ್ಥಾನ, ಜಮಖಂಡಿ	"	25.000/-
9	ಶ್ರೀ ದಿ[illegible]	"	25.000/-
10	ಶ್ರೀ ವೀರದೇವರ ದೇವಸ್ಥಾನ, ಸನಾಲಟ್ಟಿ	"	25.000/-
	ಒಟ್ಟು		2.50.000/-

2006-07ರಲ್ಲಿ ಜಮಖಂಡಿ ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರಾದ ಅನುದಾನದ ವಿವರ

ಕ್ರ.ಸಂ	ದೇವಸ್ಥಾನದ ಹೆಸರು	ತಾಲ್ಲೂಕು	ಮೊತ್ತ
1	ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಜಮಖಂಡಿ	ಜಮಖಂಡಿ	25.000/-
2	ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಜಮಖಂಡಿ	"	25.000/-
3	ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ, ಅಡಿಗುಡಿ, ಜಮಖಂಡಿ	"	25.000/-
4	ಶ್ರೀ ಬ್ರಹ್ಮದೇವರು, ಸಾವಳಗಿ, ಜಮಖಂಡಿ	"	25.000/-
5	ಶ್ರೀ ಬನಶೇಶ್ವರ ದೇವಸ್ಥಾನ, ಕಡಪಟ್ಟಿ, ಜಮಖಂಡಿ	"	50.000/-
	ಒಟ್ಟು		1.50.000/-